ಆ) ವಿಷಯ : ಭರಮಸಾಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ.

ಶ್ರೀ ಹೆಚ್.ಆಂಜನೇಯ (ಭರಮಸಾಗರ) : ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ಜಿಲ್ಲೆಯ ನನ್ನ ಕ್ಷೇತ್ರವಾದ ಭರಮಸಾಗರದಲ್ಲಿ ನಿನ್ನೆ ದಿವಸ ಒಂದು ಚಳುವಳಿಯನ್ನು ಮಾಡಲಾಗಿದೆ, ಚಳುವಳಿಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಪ್ರತಿಭಟನೆ ಮಾಡತಕ್ಕಂಥವರ ಮೇಲೆ ಪೊಲೀಸ್‌ನವರು ವಾಕಿಟಾಕ್‌ನಿಂದ ಹೊಡೆದ ಪ್ರಯುಕ್ತ ಅಲ್ಲದಂಥ ಜನ ಉದ್ರೇಕಗೊಂಡಿದ್ದಾರೆ. ಆ ಸಂದರ್ಭದಲ್ಲಿ ನಡೆಯಬಹುದಾದಂಥ ಬಹಳಷ್ಟು ಹಿಂಸಾಚಾರಗಳನ್ನು ನಮ್ಮ ಜಿಲ್ಲಾ ಪಂಚಾಯತ್‌ನ ಸದಸ್ಯರು ತಡೆಗಟ್ಟಿ ಅಲ್ಲಿ ಶಾಂತಿಯನ್ನು ಕಾಪಾಡಿದ್ದಾರೆ. ಮತ್ತೆ ಅಲ್ಲಿನ ರಾಷ್ಟ್ರೀಯ ಹೆದ್ದಾರಿಯನ್ನು ಸಹ ಬಂದ್ ಮಾಡಿದ್ದರು. ಅಲ್ಲಿನ ಪ್ರತಿಭಟನೆಗೆ ಕಾರಣವೇನೆಂದರೆ, ಭರಮಸಾಗರನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂಬುದು ಅಲ್ಲಿನ ಜನರ ಒತ್ತಾಯವಾಗಿದೆ. ಇತ್ತೀಚೆಗೆ ಸರ್ಕಾರ ಅನೇಕ ಹೊಸ ಜಿಲ್ಲೆಗಳನ್ನು ನಿರ್ಮಾಣ ಮಾಡಿದೆ. ಅದೇ ರೀತಿಯಾಗಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಭರಮಸಾಗರ ಬ್ರಿಟಿಷರ ಆಳ್ವಿಕೆಯಲ್ಲಿ ಅದು ತಾಲ್ಲೂಕು ಕೇಂದ್ರವಾಗಿತ್ತು. ಆ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಕೇಂದ್ರವಾಗಿತ್ತೆಂದು ನಾನು ಕೇಳಿಪಟ್ಟಿದ್ದೇನೆ. ಅಲ್ಲಿನ ಜನರು ಚಿತ್ರದುರ್ಗ ಜಿಲ್ಲೆಗೆ ಬರಬೇಕಾದರೆ, ಸುಮಾರು 30–40 ಕಿ.ಮೀ. ದೂರದಿಂದ ಬರಬೇಕು. ಜನರ ಹತ್ತಿರ ಹೋಗಬೇಕೆಂಬ ಕರ್ತವ್ಯ ಸರ್ಕಾರ ಇಟ್ಟುಕೊಂಡಿರುವುದರಿಂದ ಅಲ್ಲಿನ ಜನರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಭರಮಸಾಗರವನ್ನು ಒಂದು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕು. ಅಲ್ಲಿನ ಜನ ಈಗಾಗಲೇ ಸತ್ಯಾಗ್ರಹವನ್ನು ಕೂಡ ಮಾಡುತ್ತಿದ್ದಾರೆ. ಸರ್ಕಾರ ಈಗಲಾದರೂ ಮನಗೊಂಡು ಕೂಡಲೇ ಈಗ ಯಾವ್ಯಾವ ತಾಲ್ಲೂಕುಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನೂ ಸಹ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಅವುಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡಬೇಕು. ಬಹಳ ವರ್ಷಗಳ ಹಿಂದೆ ತಾಲ್ಲೂಕುಗಳನ್ನು ರಚನೆ ಮಾಡುವ ಬಗ್ಗೆ ಹುಂಡೇಕಾರ್‌ರವರು ವರದಿಯನ್ನು ಕೊಟ್ಟಿದ್ದಾರೆ. ಆದ್ದರಿಂದ, ಸರ್ಕಾರ ಅಲ್ಲಿನ ಜನರ ಭಾವನೆಯನ್ನು ಅರ್ಥ ಮಾಡಿಕೊಂಡು ಮುಂದೆ ಆಗಬಹುದಾದ ಹಿಂಸಾಚಾರಗಳನ್ನು ತಪ್ಪಿಸಲಿಕ್ಕೆ ಕೂಡಲೇ ಭರಮ

ಸಾಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಯಪೂರ್ವಕವಾಗಿ ವಿನಂತಿಮಾಡಿಕೊಳ್ಳುತ್ತೇನೆ. ಮಾನ್ಯ ಪ್ರಕಾಶ್ ಸಾಹೇಬರಿಗೆ ನಮ್ಮ ಜಿಲ್ಲೆಯ ಚರಿತೆ ಮತ್ತು ಭರಮಸಾಗರದ ಇತಿಹಾಸ ಕೂಡ ಗೊತ್ತಿದೆ. ಭರಮಪ್ಪ ನಾಯಕನಂಥ ಮಹಾನ್ ಒನ್ನ ನಾಯಕ ಅಲ್ಲಿ ಎರಡು ಕೆರೆಗಳನ್ನು ನಿರ್ಮಾಣ ಮಾಡಿದ ಮೇಲೆ ಆ ಎರಡು ಕೆರೆಗಳಿಂದ ಭರಮ ಮತ್ತು ಸಾಗರ ಎಂಬ ಹೆಸರು ಬಂತು. ಬ್ರಿಟಿಷ್ ರ ಕಾಲದಲ್ಲಿ ಅದು ತಾಲ್ಲೂಕು ಕೇಂದ್ರವಾಗಿತ್ತು ಎಂದು ಅಲ್ಲಿನ ಜನರು ಹೇಳುತ್ತಿದ್ದಾರೆ. ಈಗ ಕ್ಷೇತ್ರಳ ಮರುವಿಂಗಡನೆಯಲ್ಲಿ ನನ್ನ ಭರಮಸಾಗರ ಕ್ಷೇತ್ರವೇ ಮಾಯವಾಗಿದೆ. ಈ ಒಂದು ಕಾರಣಕ್ಕಾಗಿ ಯಾರೂ ಭರಮಸಾಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಿ ಆಡಳಿತ ದೃಷ್ಟಿಯಿಂದ ಅಲ್ಲಿನ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಮತ್ತು ಕಾನೂನು ಇಲಾಖೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, 2–8–2002ರ ನಂತರ ಮತದಾರರ ಕ್ಷೇತ್ರಗಳ ಪುನರ್ ವಿಂಗಡನೆ ಆಯೋಗ ಯಾವುದೇ ಗಡಿ ಭಾಗವನ್ನು ಬದಲಾಯಿಸಬಾರದು ಅಂದರೆ ತಾಲ್ಲೂಕು ಅಥವಾ ಪಂಚಾಯತಿ ಅಥವಾ ಜಿಲ್ಲಾ ಗಡಿಭಾಗಗಳನ್ನು ಬದಲಾಯಿಸುವಂಥ ಅಧಿಕಾರವಿಲ್ಲವೆಂದು ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ಈಗ ನಮಗೆ ಬಂದಿರತ್ಕಕಂಥ ಮಾಹಿತಿ ಪ್ರಕಾರ ಮಾನ್ಯ ಕುಲ್‌ದೀಪ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿರತಕ್ಕಂಥ ಮತದಾರರ ಕ್ಷೇತ್ರಗಳ ಪುನರ್ ವಿಂಗಡನೆ ಆಯೋಗ ತನ್ನ ಅಧಿಕೃತ ಅಧಿಸೂಚನೆಯನ್ನು ಹೊರಡಿಸುವಂಥ ಮಟ್ಟದಲ್ಲಿದೆ ಮತ್ತು ಇದಕ್ಕೆ ಸಂಬಂಧಪಟ್ಟಂಥ ಎಲ್ಲಾ ವರದಿಗಳಿಗೆ ಅವರು ಸಹಿ ಹಾಕಿದ್ದಾರೆಂದು ಪತ್ರಿಕೆಗಳ ಮೂಲಕ ನಾವು ತಿಳಿದುಕೊಂಡಿದ್ದೇವೆ. ಈ ಒಂದು ಕಾರಣಗಳಿಂದ ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳನ್ನು ಮಾಡುವ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿದ್ದರೂ ಸಹ ಅಧಿಕೃತವಾದಂಥ ಅಧಿಸೂಚನೆಯನ್ನು ನಾವು ಮಾಡಿಲ್ಲ. ಏಕೆಂದರೆ, ಆ ರೀತಿಯಾಗಿ ಮಾಡುವುದಕ್ಕೆ ಬರುವುದಿಲ್ಲ. ಸುಮಾರು 36 ಜಿಲ್ಲೆಗಳಿಗೆ ವಿಶೇಷ ಜಿಲ್ಲಾಧಿಕಾರಿಗಳನ್ನು ಹಿಂದಿನ ಸರ್ಕಾರ ನೇಮಕ ಮಾಡಿರುವಂಥದು ತಮಗೆಲ್ಲಾ ಗೊತ್ತಿದೆ. ಈಗ ಹೊಸದಾಗಿ ಮಾಡಬೇಕಾಗಿರುವ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆಂದು ಇದೇ ಸದನದಲ್ಲಿ ಹೇಳಿದ್ದಾರೆ. ಈ

ಹಿಂದೆ ರಚನೆ ಮಾಡಿರತಕ್ಕಂಥ ಸಮಿತಿಗಳು ವರದಿ ಕೊಟ್ಟ ಮೇಲೆ 78 ಕ್ಕಿಂತಲೂ ಹೆಚ್ಚು ಇಂಥ ಬೇಡಿಕೆಗಳು ಸರ್ಕಾರದ ಮುಂದಿವೆ. ಆ ಕಾರಣಕ್ಕಾಗಿಯೇ ಒಂದು ಪ್ರತ್ಯೇಕವಾದ ಸಮಿತಿಯನ್ನು ರಚನೆ ಮಾಡಿ ಆ ಸಮಿತಿಯ ಮೂಲಕವಾಗಿ ಯಾವ್ಯಾವ ತಾಲ್ಲೂಕುಗಳಿಗೆ ಆಡಳಿತಾಥ್ಮಕ ಹಿತದೃಷ್ಟಿಯಿಂದ ಮಾಡಬೇಕಾಗಿರುವ ನಿರ್ಣಯಗಳಿವೆ, ಅವುಗಳ ಪ್ರಕಾರ ಕ್ರಮ ಕೈಗೊಂಡಾಗ ಆ ವರದಿಯ ಆಧಾರದ ಮೇಲೆ ಮನವಿಯನ್ನು ತಾವು ಕೊಡಬೇಕು ಮತ್ತ ಇದರ ಆಧಾರದ ಮೇಲೆ ಭರಮಸಾಗರ ಮಧ್ಯವರ್ತಿಯಾಗಿರುವುದರಿಂದ ಮತ್ತು ಹಿಂದೆ ಕೂಡ ಬಹಳ ಪ್ರಖ್ಯಾತವಾದಂಥ ಸ್ಥಳವಾಗಿತ್ತು. ಮಾನ್ಯ ಸದಸ್ಯರು ಅಲ್ಲಿರತಕ್ಕಂಥ ಕೆರೆಗಳ ಬಗ್ಗೆ ಕೂಡ ಪ್ರಸ್ತಾಪ ಮಾಡಿದರು. ಭದ್ರಾ ಕಾಲುವೆ ತಿರುವಿನಿಂದ ಆ ಕೆರೆಗೆ ನೀರು ತುಂಬಿಸಬೇಕೆಂಬುದರ ಬಗ್ಗೆ ಒಂದು ಯೋಚನೆ ಇದೆ. ನಮ್ಮ ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನಿಂದ ಬರುವ ದೊಡ್ಡ ಹಳ್ಳದಿಂದ ನೀರು ಬಂದು ನದಿಗೆ ಸೇರತಕ್ಕಂಥದ್ದು ಮತ್ತು ಭರಮಸಾಗರದ ಕೇಡು ನೀರಿನಿಂದ ಬರತಕ್ಕಂಥ ಒಂದು ಹಳ್ಳವಾಗಿದೆ. ಅದರ ವರದಿಗಾಗಿ ಮತ್ತು ಈ ವರದಿಗಾಗಿ ಕಾಯಬೇಕಾಗಿದೆ. ಅದು ಬಂದ ತಕ್ಷಣವೇ ಆದ್ಯತೆ ಮೇರೆಗೆ ಅದರ ಅಗತ್ಯತೆಗೆ ಅನುಗುಣವಾಗಿ ತಾಲ್ಲೂಕು ರಚನೆ ಮಾಡುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ.

ಶ್ರೀ ಹೆಚ್.ಆಂಜನೇಯ : ಇನ್ನೂ ಕೆಲವು ಕಡೆ ತಾಲ್ಲೂಕುಗಳನ್ನು ಮಾಡಬೇಕೆಂಬುದರ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆಗಳಿವೆ. ಆದ್ದರಿಂದ, ನಮ್ಮ ಭರಮಸಾಗರವನ್ನು ತಾಲ್ಲೂಕು ಮತ್ತು ವಿಶೇಷ ತಹಶೀಲ್ದಾರ್‌ರವರನ್ನು ನೇಮಕ ಮಾಡುವುದಕ್ಕೆ ತಾವು ಕ್ರಮ ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕುಗಳಲ್ಲಿ ತಹಶೀಲ್ದಾರ್‌ಗಳನ್ನು ನೇಮಕಾತಿ ಮಾಡುವುದಕ್ಕೆ ನಮ್ಮಲ್ಲಿ ಕಷ್ಟವಿದೆ. ಏಕೆಂದರೆ, ಇದಕ್ಕೆ ಬೇಕಾಗಿರತಕ್ಕಂಥ ಬಹಳ ಜನ ಅಧಿಕಾರಿಗಳು ನಮ್ಮಲ್ಲಿ ಇಲ್ಲ. ಮತ್ತೆ ಕೆಲವರು ತರಬೇತಿಯಲ್ಲಿದ್ದಾರೆ ಮತ್ತು ಇತ್ತೀಚೆಗೆ ಆಯ್ಕೆಯಾಗಿರತಕ್ಕಂಥವರು ಇದ್ದಾರೆ. ಆ ಕಾರಣಕ್ಕಾಗಿ ವಿಶೇಷ ತಹಶೀಲ್ದಾರ್‌ಗಳ ನೇಮಕಾತಿ ಮಾಡತ ಕ್ಕಂಥದಕ್ಕೆ ನಿಯಮಾವಳಿಗಳಿವೆ. ತಮ್ಮ ಅಭಿಪ್ರಾಯವನ್ನು ಸನ್ಮಾನ್ಯ ಕಂದಾಯ ಸಚಿವರಿಗೆ ತಿಳಿಸುತ್ತೇನೆ. ಅದರ ಬಗ್ಗೆ ಅವರು ಪ್ರತಿಕ್ರಿಯೆ ಕೊಡುತ್ತಾರೆ.